**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.120/2019**

**(ಚಾ.ಸಾ.5/ಪ್ರಾ.ಸಾ.4)**

ತಾಃ 06-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಶ್ರೀನಿವಾಸಪ್ಪ |
| ತಂದೆಯ ಹೆಸರು | ಕೃಷ್ಣಪ್ಪ |
| ವಯಸ್ಸು | 52 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ದಳಸಗೆರೆ |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ.1 ರವರು ನನ್ನ ಮಗನಾಗಿದ್ದು, ಚಾಸಾ.3 ನನ್ನ ತಮ್ಮನಾಗಿದ್ದು, ಚಾಸಾ.2 ನನ್ನ ತಮ್ಮನ ಹೆಂಡತಿ ಆಗಿರುತ್ತಾರೆ. ಚಾಸಾ.4 ಕೃಷ್ಣಪ್ಪ ನನ್ನ ತಂದೆ ಆಗಿರುತ್ತಾರೆ. ನಮಗೆ ದಳಸಗೆರೆ ಗ್ರಾಮದಲ್ಲಿ ಸರ್ವೆ ನಂ.171 ರಲ್ಲಿ 13 ¼ ಗುಂಟೆ ಜಮೀನು ನನ್ನ ತಂದೆಯಾದ ಚಾಸಾ.4 ರವರ ಹೆಸರಿನಲ್ಲಿ ಇರುತ್ತದೆ. ಆರೋಪಿತರ ತಾತ ಹಾಗೂ ನನ್ನ ತಾತ ಅಣ್ಣ ತಮ್ಮಂದಿರಾಗಿರುತ್ತಾರೆ. ಸುಮಾರು 4 ವರ್ಷಗಳ ಹಿಂದೆ ಸದರಿ ಜಮೀನಿನಲ್ಲಿ ಆರೋಪಿತರು ಬಂದು ಚಪ್ಪಡಿಕಲ್ಲು ಎತ್ತುತ್ತಿದ್ದು, ಆಗ ಚಾಸಾ.4 ರವರು ಬಂದು ಸದರಿ ಸ್ವತ್ತು ನನಗೆ ಸೇರಿದ್ದು, ಅಲ್ಲಿ ಏನೂ ಕೆಲಸ ಮಾಡಬೇಡಿ ಎಂದು ಆರೋಪಿತರಿಗೆ

ತಿಳಿಸಿರುತ್ತಾರೆ. ಆಗ ಸಮಯ ಬೆಳಿಗ್ಗೆ 11:00 ಗಂಟೆ ಆಗಿತ್ತು. ನಂತರ ಆರೋಪಿತರು ವಾಪಸ್ ಹೋಗಿದ್ದು, ನನ್ನ ತಂದೆ H Cross ಗೆ ಹೋಗಿರುತ್ತಾರೆ. ಪುನಃ ಮಧ್ಯಾಹ್ನ 04:00 ಗಂಟೆ ಸಮಯದಲ್ಲಿ ಕಲ್ಲುಚಪ್ಪಡಿ ಎತ್ತಲು ಆರೋಪಿತರು ಪ್ರಯತ್ನಿಸುತ್ತಿದ್ದು, ಆ ಸಮಯದಲ್ಲಿ ನಾನು ನಮ್ಮ ತೋಟಕ್ಕೆ ಹೋಗಿದ್ದು, ಆಗ ಆ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ.

2. ನನಗೆ ಯಾರೋ ಒಬ್ಬರು ಬಂದು ನಮ್ಮ ಮನೆಯ ಬಳಿ ಗಲಾಟೆ ಆಗುತ್ತಿರುವುದಾಗಿ ತಿಳಿಸಿದ್ದು, ಅದಕ್ಕಾಗಿ ನಾನು ಸ್ಥಳಕ್ಕೆ ಬಂದಾಗ ಗಲಾಟೆ ಮುಗಿದಿದ್ದು, ನನ್ನ ಮಗ ಚಾಸಾ.1 ರವರ ತಲೆಯಲ್ಲಿ ರಕ್ತ ಬರುತ್ತಿತ್ತು. ನನ್ನ ಮನೆ ಹಾಗೂ ಆರೋಪಿತರ ಮನೆ ಸರ್ವೆ ನಂ.171 ರಲ್ಲಿ ಇರುತ್ತದೆ. ನಂತರ ನನ್ನ ಬೈಕ್ ನಲ್ಲಿ ಚಾಸಾ.1 ರವರನ್ನು ನಂದಗುಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆ ಸಮಯದಲ್ಲಿ ಚಾಸಾ.2 ರವರ ಕೈ ತಿರುಗಿದ್ದು ಅವರನ್ನು ಚಾಸಾ.3 ರವರು ತನ್ನ ಬೈಕ್ ನಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಗಲಾಟೆಯನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಆದರೆ ದೊಣ್ಣೆ ಹಾಗೂ ರಾಡ್ ನಲ್ಲಿ ಹಲ್ಲೆ ಮಾಡಿರುವುದಾಗಿ ತಿಳಿದುಬಂತು. ಚಾಸಾ.1 ರವರು ನಂದಗುಡಿ ಸರ್ಕಾರಿ ಆಸ್ಪತ್ರೆಯಲ್ಲಿ 6 ದಿವಸಗಳಕಾಲ ದಾಖಲಾಗಿದ್ದು, ನಂತರ ಬೇರೆ ಆಸ್ಪತ್ರೆಗೆ ದಾಖಲಿಸಿದ್ದೆವು. ನನಗೆ ದೊಣ್ಣೆ ಹಾಗೂ ರಾಡ್ ಗಳನ್ನು ನೋಡಿದಲ್ಲಿ ಗುರುತಿಸಲು ಆಗುವುದಿಲ್ಲ. ಆರೋಪಿತರು ಚಾಸಾ.1 ಹಾಗೂ 2 ರವರಿಗೆ ಹೊಡೆಯುತ್ತಿದ್ದುದನ್ನು ನಾನು ನೋಡಿ ಗಲಾಟೆಯನ್ನು ಬಿಡಿಸಿರುವುದಾಗಿ ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಚಾಸಾ.1 ಮತ್ತು 2 ರವರಿಗೆ ನಿಪಿ.3 ರಿಂದ 5 ರ ಫೋಟೋದಲ್ಲಿ ಕಂಡುಬರುವ ರೀತ್ಯಾ ಏಟು ಬಿದ್ದಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

1. ನಮಗೂ ಆರೋಪಿತರಿಗೂ ಮೊದಲಿನಿಂದಲೂ ಜಮೀನಿನ ವಿಷಯವಾಗಿ ಗಲಾಟೆ ಇತ್ತು ಎಂದರೆ ಸರಿ. ಆಗ್ಗಾಗ್ಗ ಜಮೀನಿನ ವಿಚಾರವಾಗಿ ನಮ್ಮ ನಡುಗೆ ಸಣ್ಣಪುಟ್ಟ ಗಲಾಟೆ ಆಗುತ್ತಿತ್ತು ಎಂದರೆ ಸರಿ. ಇದೇ ಕಾರಣಕ್ಕಾಗಿ ನಾವು ಹಾಗೂ ಆರೋಪಿತರು ಸೇರಿಕೊಂಡು ಪಂಚಾಯ್ತಿಯಲ್ಲಿ ಬಗೆಹರಿಸಿಕೊಳ್ಳೋಣ ಎಂದು ಹೇಳಿ ಅಲ್ಲಿಯವರೆಗೂ ಜಮೀನಿನಲ್ಲಿ ನಾವು ಹಾಗೂ ಆರೋಪಿತರು ಏನನ್ನೂ ಮಾಡಬಾರದು ಎಂದು ಪಂಚಾಯ್ತಿದಾರರು ತಿಳಿಸಿದ್ದರು ಎಂದರೆ ಸರಿ. ದಿನಾಂಕ 13-10-2018 ರಂದು ಬೆಳಿಗ್ಗೆ 11ಃ0 ಗಂಟೆಯಲ್ಲಿ ಆರೋಪಿತರು ಸರ್ವೆ ನಂ.171 ರಲ್ಲಿ ಕಲ್ಲುಚಪ್ಪಡಿ ಎತ್ತಲು ಬಂದಾಗ ನನ್ನ ತಂದೆ ಅವರಿಗೆ ಕೆಲಸ ಮಾಡದಂತೆ ಹೇಳಿ H Cross ಗೆ ಹೋಗಿದ್ದರು ಎಂದರೆ ಸರಿ. ನನ್ನ ತಂದೆ ಆರೋಪಿತರಿಗೆ ಹೇಳಿದ ಸಮಯದಲ್ಲಿ ನಾನು ಸಹ ಸ್ಥಳದಲ್ಲಿ ಹಾಜರಿದ್ದು, ನಂತರ ತೋಟಕ್ಕೆ ಹೋಗಿದ್ದೆನು ಎಂದರೆ ಸರಿ. ನಾನು ತೋಟದಲ್ಲಿ ಇದ್ದಾಗ ಸಂಜೆ 04ಃ15 ರಲ್ಲಿ ಯಾರೋ ನನಗೆ ಫೋನ್ ಮಾಡಿ ಆರೋಪಿತರು ಚಾಸಾ.1 ರಿಂದ 3 ರವರ ಮೇಲೆ ಗಲಾಟೆ ಮಾಡುತ್ತಿರುವುದಾಗಿ ತಿಳಿಸಿದ್ದರು ಎಂದರೆ ಸರಿ. ನಾನು ತಕ್ಷಣ ಸ್ಥಳಕ್ಕೆ ಹೋದಾಗ ಆರೋಪಿತರು ಗುಂಪುಕಟ್ಟಿಕೊಂಡು ಗಲಾಟೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಅಲ್ಲಿ ಇದ್ದರು ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಆರೋಪಿತರು ಚಾಸಾ.1 ರಿಂದ 3 ರವರ ಮೇಲೆ ಹಲ್ಲೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಾನು ಹೋಗುವಷ್ಟರಲ್ಲಿಗಲಾಟೆ ಆಗಿತ್ತು ಎಂದು ನುಡಿದಿರುತ್ತಾರೆ.

2. ತಕ್ಷಣ ನಾನು ಹೋಗಿ ಗಲಾಟೆ ಬಿಡಿಸಿ ನನ್ನ ಮಗನ ತಲೆಯಿಂದ ರಕ್ತ ಸುರಿಯುತ್ತಿದ್ದ ಕಾರಣ ನನ್ನ ಬೈಕ್ ನಲ್ಲಿ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆನು ಎಂದರೆ ಸರಿ. ನಾನು ಚಾಸಾ.1 ರವರ ಬಳಿ ಗಲಾಟೆ ಹೇಗೆ ಆಯಿತು, ಯಾರು ಯಾವುದರಿಂದ ಹೊಡೆದಿರುತ್ತಾರೆ ಎಂದು ವಿಚಾರಿಸಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರು ಸಂಜೆ 04:00 ಗಂಟೆ ಸಮಯದಲ್ಲಿ ಗುಂಪುಕಟ್ಟಿಕೊಂಡು ಬಂದು ಕೈಗಳಲ್ಲಿ ದೊಣ್ಣೆ ಹಾಗೂ ಕಬ್ಬಿಣದ ರಾಡ್ ಗಳನ್ನು ಹಿಡಿದು ಈ ದಿನ ಯಾರು ಬರುತ್ತಾರೋ ಬರಲಿ ಅವರಿಗೆ ಒಂದುಗತಿ ಕಾಣಿಸುವುದಾಗಿ ಹೇಳಿ ಕಲ್ಲುಚಪ್ಪಡಿಗಳನ್ನು ಎತ್ತುತ್ತಿದ್ದರು ಎಂದು ತಿಳಿಸಿದ್ದರು ಎಂದರೆ ಸರಿ. ಆಗ ತಾನು, ಚಾಸಾ.2 ಮತ್ತು 3 ರವರು ಚಾಸಾ.4 ರವರು ಮನೆಯಲ್ಲಿ ಇಲ್ಲದಿರುವ ಕಾರಣ ಅವರು ಬರುವವರೆಗೂ ಕಲ್ಲುಚಪ್ಪಡಿಗಳನ್ನು ಎತ್ತದಂತೆ ತಡೆಯಲು ಹೋದಾಗ ಆರೋಪಿತರು ತಮಗೆ ಕೆಟ್ಟ ಶಬ್ಧಗಳಿಂದ ಬೈದು ಈ ದಿನ ಯಾರಾದರು ಬಂದಲ್ಲಿ ನಿಮ್ಮಲ್ಲಿ ಒಬ್ಬರನ್ನು ಸಾಯಿಸದೇ ಬಿಡುವುದಿಲ್ಲ ಎಂದು ಹೇಳಿ ನಂತರ 1 ನೇ ಆರೋಪಿ ಕಬ್ಬಿಣದ ರಾಡ್ ನಿಂದ ತನ್ನ ತಲೆಗೆ ಹೊಡೆದಿದ್ದು, ಚಾಸಾ.2 ಮತ್ತು 3 ರವರು ಗಲಾಟೆ ಬಿಡಿಸಲು ಹೋದಾಗ 3 ನೇ ಆರೋಪಿ ಚಾಸಾ.2 ರವರ ಬಟ್ಟೆ ಎಳೆದಾಡಿ ಅವರ ಬಲಗೈ ತಿರುಚಿ ಗಾಯಗೊಳಿಸಿರುವುದಾಗಿ ಚಾಸಾ.1 ರವರು ನನಗೆ ತಿಳಿಸಿದ್ದರು ಎಂದರೆ ಸರಿ, ಆದರೆ ನಾನು ಗಲಾಟೆ ನೋಡಿರುವುದಿಲ್ಲ. ನಂತರ 2 ನೇ ಆರೋಪಿ 3 ನೇ ಆರೋಪಿಯಿಂದ ದೊಣ್ಣೆ ಕಸಿದುಕೊಂಡು ಚಾಸಾ.3 ರವರಿಗೆ ಹೊಡೆಯಲು ಹೋದಾಗ ಚಾಸಾ.3 ರವರು ತಪ್ಪಿಸಿಕೊಂಡಾಗ ಆತನ ಕೈಗೆ ಪೆಟ್ಟುಬಿದ್ದಿರುವುದಾಗಿ ಚಾಸಾ.1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ನಂತರ 4 ರಿಂದ 7 ನೇ ಆರೋಪಿತರು ತಮ್ಮ ಕೈಕಾಲುಗಳಿಂದ ಹೊಡೆದು ಒದ್ದಿರುವುದಾಗಿ ಚಾಸಾ.1 ರವರು ನನಗೆ ತಿಳಿಸಿದರು ಎಂದರೆ ಸರಿ.

ಎಸ್.ಸಿ.ನಂ.120/2019
ಚಾ.ಸಾ.5/ಪ್ರಾ.ಸಾ.4

3. ಪ್ರಕರಣದ ಬಗ್ಗೆ ವಿಚಾರಿಸಲು ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಪೊಲೀಸರಿಗೆ ಮೇಲೆ ಹೇಳಿದಂತೆ ವಿಚಾರ ತಿಳಿಸಿದ್ದೆನು ಎಂದರೆ ಸರಿ. ನನ್ನ ಹೇಳಿಕೆಯ ಸಮಯದಲ್ಲಿ ನಾನು ಮನೆಯ ಬಳಿ ಹೋದಾಗ ಆರೋಪಿತರು ಗುಂಪುಕಟ್ಟಿಕೊಂಡು ಚಾಸಾ.1 ರಿಂದ 3 ರವರಿಗೆ ಹೊಡೆಯುತ್ತಿದ್ದು, ನಾನು ಆರೋಪಿತರಿಂದ ಚಾಸಾ.1 ರಿಂದ 3 ರವರನ್ನು ಬಿಡಿಸಿರುವುದಾಗಿ ಪೊಲೀಸರ ಮುಂದೆ ಹೇಳಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿಪರ ಶ್ರೀ.ಎಮ್.ಜಿ.ಕೆ.ವಕೀಲರಿಂದಃ</u>

ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲವಾಗಿ ವಕೀಲರ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.